ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrar@bcu.ac.in

ನಂ: ಬಿಸಿಯು/ಶೈಕ್ಷಣಿಕ/ಸ್ನಾತಕ.ಪ್ರವೇಶ/ಕ್ರೀಡಾ.ಶುಲ್ಕ/02/2024-25 ದಿನಾಂಕ:15.05.2024

## ಸುತ್ತೋಲೆ

**ವಿಷಯ:** ಪ್ರವೇಶಾತಿ ಸಮಯದಲ್ಲಿ ಕಾಲೇಜುಗಳಲ್ಲಿ ಸ್ವೀಕರಿಸಲಾಗುತ್ತಿರುವ ಕ್ರೀಡಾ ಶುಲ್ಕವನ್ನು ವಿಶ್ವವಿದ್ಯಾನಿಲಯ ಸಂದಾಯ ಮಾಡುವ ಕುರಿತು:

**ಉಲ್ಲೇಖ:** 1. ಕ್ರೀಡಾ ಸಲಹಾ ಸಮಿತಿಯ ತೀರ್ಮಾನ ದಿನಾಂಕ:03.11.2023

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15.05.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸಂಯೋಜಿತ ಕಾಲೇಜುಗಳ ಪ್ರತಿ ವಿದ್ಯಾರ್ಥಿಯಿಂದ, ಪ್ರವೇಶಾತಿ ಸಮಯದಲ್ಲಿ ಕ್ರೀಡಾ ಶುಲ್ಕವನ್ನು ವಸೂಲಿ ಮಾಡಿ ಅದರಲ್ಲಿ ಶೇಕಡಾ 30ರಷ್ಟು ಮೊತ್ತವನ್ನು ಆಯಾ ಕಾಲೇಜಿನ ಕ್ರೀಡಾ ಚಟುವಟಿಕೆಗಳಿಗೆ ಉಪಯೋಗಿಸಿಕೊಂಡು ಉಳಿದ ಶೇಕಡಾ 70ರಷ್ಟು ಮೊತ್ತವನ್ನು ಕ್ರೀಡಾ ಶುಲ್ಕವೆಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪದ್ಧತಿಯನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಕೈಬಿಡಲಾಗಿದೆ. ಮೇಲಿನ ಶೇಕಡಾ 70:30 ಅನುಪಾತದಲ್ಲಿ ಈ ಕೆಳಗಿನಂತೆ ಮಹಾವಿದ್ಯಾಲಯ/ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಬೇಕಾದ ಶುಲ್ಕವನ್ನು ಪ್ರತ್ಯೇಕವಾಗಿ ವಿಂಗಡಿಸಿ (Separate) ವಿಶ್ವವಿದ್ಯಾನಿಲಯದ ಶುಲ್ಕವನ್ನು ಮಾತ್ರ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

| ಕ್ರೀಡಾ ಶುಲ್ಕ (2024–25) | 70ರಷ್ಟು ವಿಶ್ವವಿದ್ಯಾನಿಲಯದ ಮೊತ್ತವನ್ನು ಪ್ರತ್ಯೇಕವಾಗಿ ವಿಂಗಡಿಸಿ ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಬೇಕಾದ ಮೊತ್ತ | 30 ರಷ್ಟು ಕಾಲೇಜಿನ ಮೊತ್ತವನ್ನು ಪ್ರತ್ಯೇಕವಾಗಿ ಕಾಲೇಜಿನ ಶುಲ್ಕದಲ್ಲಿ ಸೇರಿಸಿಕೊಳ್ಳಬೇಕಾಗಿರುವ ಮೊತ್ತ |
|---|---|---|
| 973 | 681 | 292 |

ಕುಲಸಚಿವರು

ಗೆ,

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

**ಪ್ರತಿಗಳು:**

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ. ಬೆಂಗಳೂರು.
2. ಸಂಯೋಜಕರು, ಯು.ಯು.ಸಿ.ಎಮ್.ಎಸ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಕಛೇರಿ ಪ್ರತಿ/ರಕ್ಷಾ ಕಡತ.
4. ಅಂತರ್ಜಾಲದ ಪ್ರತಿ.